ಅಧಿವೇಶನದಲ್ಲಿ, ಕೆ.ಪಿ.ಎಸ್.ಸಿ.ಯಿಂದ ನೇಮಕವಾದ ಕೂಡಲೇ ವೈದ್ಯರ ನೇಮಕಾತಿಯನ್ನು ಮಾಡುತ್ತೇವೆ ಎಂದು ಹೇಳಿದ್ದರು. ಈಗಲಾದರೂ ಮಾನ್ಯ ಸಚಿವರು, ಎಷ್ಟು ದಿವಸದಲ್ಲಿ ಖಾಲಿ ಇರುವಂಥ ಹುದ್ದೆಗಳಿಗೆ ನೇಮಕ ಮಾಡುತ್ತಾರೆ ಎಂದು ಕೇಳಬಯಸುತ್ತೇನೆ.

ಡಾ॥ ಹೆಚ್. ಸಿ. ಮಹದೇವಪ್ಪ : ಸನ್ಮಾನ್ಯ ಸಭಾಧ್ಯಕ್ಷರೇ, ಹಿರೇಕೆರೂರು ತಾಲ್ಲೂಕಿನಲ್ಲಿ ಮಂಜೂರಾದಂಥ ವೈದ್ಯರ ಹುದ್ದೆಗಳು ಒಟ್ಟು 17. ಅದರಲ್ಲಿ ಒಂದೇ ಒಂದು ಹುದ್ದೆ ಖಾಲಿಯಿರ -ತಕ್ಕಂಥಾದ್ದು. ಉಳಿದ 16 ಹುದ್ದೆಗಳನ್ನು ತುಂಬಿದ್ದೇವೆ. ಅವರು ಅಲ್ಲಿಗೆ ಹೋಗಿ ಡ್ಯೂಟಿ ರಿಪೋರ್ಟ್ ಮಾಡಿಕೊಳ್ಳಬೇಕಾಗಿದೆ. ಎಲ್ಲಿ ವೈದ್ಯರ ನೇಮಕವಾಗಿದೆ, ಅವರು ಅಲ್ಲಿಗೆ ಹೋಗದೆ, ಅಲ್ಲಿ ಇಲ್ಲಿ ಕುಳಿತುಕೊಂಡು ಒತ್ತಡ ತರತಕ್ಕಂಥ ವೈದ್ಯರ ವಿರುದ್ಧ ಸರ್ಕಾರ ಶಿಸ್ತಿನ ಕ್ರಮಕೈಗೊಳ್ಳುತ್ತದೆ. ಈಗ ಅವರು ಹೇಳಿರತಕ್ಕಂಥ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಕುಡಪಲಿ ಪಿ.ಹೆಚ್.ಸಿ.ಗೆ ಒಬ್ಬ ಗುತ್ತಿಗೆ ವೈದ್ಯರನ್ನು ನೇಮಕ ಮಾಡಿಕೊಂಡಿದ್ದೇವೆ. ಅವರು ಇನ್ನೂ ಡ್ಯೂಟಿ ರಿಪೋರ್ಟ್ ಮಾಡಿಕೊಂಡಿಲ್ಲ. ಮಾಡಿಕೊಳ್ಳಲಿಲ್ಲ ಎಂದರೆ ತಕ್ಷಣ ನಾನು ಅದನ್ನು ತಿಳಿದುಕೊಂಡು ವ್ಯವಸ್ಥೆ ಮಾಡುತ್ತೇನೆ. 17 ಹುದ್ದೆಗಳಲ್ಲಿ 1 ಖಾಲಿ ಇದೆ.

ಅಧ್ಯಕ್ಷರು : ಲೋಕಸೇವಾ ಆಯೋಗದಿಂದ ಆಯ್ಕೆಯಾಗಿ ಬಂದಿರುವ ಅಭ್ಯರ್ಥಿಗಳಿಗೆ ಪೋಸ್ಟಿಂಗ್ಸ್ ಕೊಟ್ಟಿದ್ದಾರೆ. ಆ ವಿಚಾರದಲ್ಲಿ ಕ್ರಮ ತೆಗೆದುಕೊಂಡಿದ್ದಾರೆ. ನಾನೂ ತರಿಸಿ ನೋಡಿದ್ದೇನೆ. ಆ ವಿಚಾರದಲ್ಲಿ ಮಾಡಿಕೊಡುತ್ತಾರೆ.

ಶ್ರೀ ಯು. ಬಿ. ಬಣಕಾರ್ : ಬಹಳಷ್ಟು ಜನ ಇನ್‌ಫ್ಲುಯನ್ಸ್ ತೆಗೆದುಕೊಂಡು ತಮ್ಮ ವರ್ಗಾವಣೆಯನ್ನು ಕ್ಯಾನ್ಸಲ್ ಮಾಡಿಸಿಕೊಳ್ಳಲು ಇಲ್ಲಿ ನಡೆಸಿದ್ದಾರೆ. ದಯವಿಟ್ಟು ಅದಕ್ಕೆ ಯೀಲ್ಡ್ ಆಗಬಾರದು.

ಅಧ್ಯಕ್ಷರು : ಈಗ ರಿಪೋರ್ಟ್ ಆಗದಿದ್ದರೆ ಅವರನ್ನು ಡಿಸ್‌ಮಿಸ್ ಮಾಡುವುದೇ, ಅಥವ ಅವರನ್ನು ತಗೆಯುವುದೇ. ಹಾಗೆ ತೀರ್ಮಾನಕ್ಕೆ ಬರಲಾಗಿದೆ. ರಿಪೋರ್ಟ್ ಮಾಡಿಕೊಳ್ಳಲು ಬಹುಶಃ ನಾಳೆಯೋ ನಾಡಿದ್ದೋ ಲಾಸ್ಟ್ ಡೇಟ್ ಇರಬೇಕು. ಏನು ಆಗುತ್ತದೋ, ನೋಡೋಣ.

## ಸ್ವಸ್ತಿ ಗ್ರಾಮ ಯೋಜನೆ

549 - ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮಾಂತರ) : ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಸರ್ಕಾರದಿಂದ ನವೀನ ಯೋಜನೆಯಾದ ಸ್ವಸ್ತಿ ಗ್ರಾಮ ಯೋಜನೆ ಎಂದಿನಿಂದ ಜಾರಿಗೊಳಿಸಲಾಗುವುದು?*

*ಆ) ಈ ಯೋಜನೆಯ ಮುಖ್ಯ ಕಾರ್ಯಕ್ರಮಗಳೇನು?*

*ಇ) ಈ ಯೋಜನೆಗೆ ಈ ವರ್ಷ ನಿಗದಿ ಪಡಿಸಿದ ಹಣವೆಷ್ಟು?*

*ಈ) ಈ ಯೋಜನೆಯ ಲಾಭ ಯಾರಿಗೆ ದೊರಕುತ್ತದೆ? (ವಿವರಗಳನ್ನು ಒದಗಿಸುವುದು).*

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

ಅ) ದಿನಾಂಕ 15ನೇ ಆಗಸ್ಟ್ 1997ರಿಂದ ಜಾರಿಗೊಳಿಸಲಾಗಿದೆ.

ಆ) ಈ ಆಂದೋಲನದ ಮೂಲಕ ಮಾದರಿ ಗ್ರಾಮಗಳನ್ನು ಅಭಿವೃದ್ಧಿಗೊಳಿಸಲು ಉದ್ದೇಶಿಸಿದೆ. ಈ ಯೋಜನೆಯ ವಿವರಗಳನ್ನು ಅನುಬಂಧದಲ್ಲಿ ಅಡಕಮಾಡಿದೆ.

ಇ) ಅಗತ್ಯವಿರುವ ಶೇ.50 ಅನುದಾನವನ್ನು ಜಿಲ್ಲಾ ಪಂಚಾಯತ್‌ಗಳು ಅನುಷ್ಠಾನ ಮಾಡುತ್ತಿರುವ ವಿವಿಧಯೋಜನೆಗಳಿಂದ ಒದಗಿಸಲಾಗುವುದು. ಉಳಿದ ಶೇ.40 ಅನುದಾನವನ್ನು ಕೈಗಾರಿಕೆ ಮತ್ತು ವ್ಯಾಪಾರಿ ಸಂಸ್ಥೆಗಳಿಂದ ಹಾಗೂ ಶೇ.10ರಷ್ಟನ್ನು ಸಂಬಂಧಪಟ್ಟ ಗ್ರಾಮಸ್ಥರಿಂದ ಒದಗಿಸಬೇಕಾಗುವುದು.

ಈ) ಈ ಯೋಜನೆಯ ಉದ್ದೇಶ ಗ್ರಾಮದ ಸರ್ವತೋಮುಖ ಅಭಿವೃದ್ಧಿಯಾಗಿದ್ದು ಸದರಿ ಗ್ರಾಮದವೆರೆಲ್ಲರೂ ಇದರ ಲಾಭವನ್ನು ಪಡೆಯುತ್ತಾರೆ.

## ಅನುಬಂಧ

### ಸ್ವಸ್ತಿ ಗ್ರಾಮ ಯೋಜನೆ

ಸ್ವಸ್ತಿ ನಮ್ಮ ಬಹು ಸಂಖ್ಯಾತ ಗ್ರಾಮೀಣ ಸಮುದಾಯಕ್ಕೆ ನವಚೈತನ್ಯ ನೀಡುವ ಯೋಜನೆ. ಭಾರತದ ಮೂಲಘಟಕ ಗ್ರಾಮ, ಗ್ರಾಮೀಣ ಅಭಿವೃದ್ಧಿ ದೇಶದ ಪ್ರಗತಿಯದ್ಯೋತಕ. ರಾಷ್ಟ್ರಪಿತ ಮಹಾತ್ಮ ಗಾಂಧಿ ಅವರ ಕಲ್ಪನೆಯ ಸರ್ವಸ್ವತಂತ್ರ ಭಾರತದ ಸರ್ಕಾರಕ್ಕೆ ದಿಟ್ಟ ಪ್ರಯೋಗ ಸ್ವಸ್ತಿ ಗ್ರಾಮ ಯೋಜನೆ.

ಗ್ರಾಮೀಣ ಬದುಕನ್ನು ಶ್ರೀಮಂತಗೊಳಿಸುವುದು ಸ್ವಸ್ತಿ ಯೋಜನೆಯ ಆಶಯ. ಉತ್ತಮ ಪರಿಸರ, ವಸತಿ, ಶಿಕ್ಷಣ, ಆರೋಗ್ಯ ಮೊದಲಾದ ಮೂಲಭೂತ ಸೌಲಭ್ಯ ಒದಗಿಸಲು ಈ ಯೋಜನೆಯಲ್ಲಿ ಆದ್ಯತೆ ನೀಡಲಾಗುವುದು. ಜನಸಮುದಾಯದ ಸಕ್ರಿಯ ಸಹಕಾರದಿಂದ, ಅವರ ಪಾಲ್ಗೊಳ್ಳುವಿಕೆಯಿಂದ ಕಾರ್ಯಕ್ರಮ ಅನುಷ್ಠಾನಗೊಳ್ಳುತ್ತದೆ.

ದಾನಿ : ಪ್ರವರ್ತಕ ಸಂಸ್ಥೆಗಳು ಹಾಗೂ ಫಲಾನುಭವಿ ಜನಸಮುದಾಯ ಯೋಜನೆಯಲ್ಲಿ ಮುಖ್ಯ ಪಾತ್ರವಹಿಸುತ್ತಾರೆ. ಯೋಜನೆಗೆ ಅಗತ್ಯವಾದ ಹೆಚ್ಚಿನ ಆರ್ಥಿಕ ಸಂಪನ್ಮೂಲವನ್ನು ಜನತೆ ಹಾಗೂ ದಾನಿಗಳಿಂದಲೂ ಕ್ರೋಢಿಕರಿಸಲಾಗುವುದು. ಸರ್ಕಾರ ಈ ಕಾರ್ಯಕ್ರಮದಲ್ಲಿ ಪ್ರೇರಣಾಶಕ್ತಿಯಾಗಿ ಮಾತ್ರ ಕಾರ್ಯನಿರ್ವಹಿಸುತ್ತದೆ. ಆದ್ದರಿಂದಲೇ ಇದು ಜನರಿಂದ, ಜನರಿಗಾಗಿ ಇರುವ ಕಾರ್ಯಕ್ರಮವಾಗಿದೆ.

## ಗ್ರಾಮೀಣ ಬದುಕಿನ ನಾಲ್ಕು ಮುಖ್ಯ ಅಂಶಗಳು

ಈ ಯೋಜನೆಯ ಕೆಳಕಂಡ ಅಂಶಗಳ ಅಭಿವೃದ್ಧಿ ಬಗ್ಗೆ ಕೇಂದ್ರೀಕೃತವಾಗಿದೆ.

1. ಗ್ರಾಮದ ಆರ್ಥಿಕ ಹಿತಸಾಧನೆಗಾಗಿ ಭೂಸಾರ, ಭೂಜಲ ಮತ್ತು ಸಸ್ಯ ಸಂಪತ್ತುಗಳ ಸಂರಕ್ಷಣೆ ಹಾಗೂ ನಿರ್ವಹಣೆ.

2. ಗ್ರಾಮೀಣ ಬದುಕಿನ ಸ್ಥಿತಿಗತಿಗಳ ಸುಧಾರಣೆಗಾಗಿ ವಸತಿ, ನೈರ್ಮಲ್ಯ ಮತ್ತು ಕುಡಿಯುವ ನೀರಿನ ಪೂರೈಕೆ.

3. ಗ್ರಾಮೀಣ ಜೀವನದ ಗುಣಮಟ್ಟವನ್ನು ಹೆಚ್ಚಿಸಲು ಹಾಗೂ ಭವಿಷ್ಯದ ಗ್ರಾಮ ಸಮುದಾಯದ ಸರ್ವಾಂಗೀಣ ಅಭಿವೃದ್ಧಿಯನ್ನು ಸಾಧಿಸಲು ಅಂಗನವಾಡಿಗಳು, ಶಾಲೆಗಳು, ಆರೋಗ್ಯ ಪರಿಕರಗಳು, ಸಮುದಾಯ ಕೇಂದ್ರಗಳು, ವಾಚನಾಲಯಗಳು ಮುಂತಾದವುಗಳ ಸ್ಥಾಪನೆ ಹಾಗೂ ನಿರ್ವಹಣೆ.

4. ಗ್ರಾಮಗಳಲ್ಲಿ ಆರ್ಥಿಕ ಮೂಲಭೂತ ಸೌಲಭ್ಯಗಳನ್ನು ಹಾಗೂ ಬಹುಮುಖಿ ಸಂಪರ್ಕ ವ್ಯವಸ್ಥೆಯನ್ನು ಕಲ್ಪಿಸಲು.

   ರಸ್ತೆಗಳ ನಿರ್ಮಾಣ, ಗ್ರಾಮೀಣ ಯುವ ಜನರಿಗೆ ಸ್ವಯಂ ಉದ್ಯೋಗಕ್ಕಾಗಿ ತರಭೇತಿ ಮುಂತಾದ ಸೌಲಭ್ಯಗಳು.

## ಖಾಸಗಿ ಸಹಭಾಗಿತ್ವ

ಸ್ವಸ್ತಿ ಗ್ರಾಮದ ಈ ಎಲ್ಲಾ ಚಟುವಟಿಕೆಗಳಲ್ಲಿ ಗ್ರಾಮದ ಜನತೆ ಪಾಲ್ಗೊಳ್ಳುವಂತೆ ಮಾಡಲಾಗುತ್ತದೆ. ಸೌಲಭ್ಯಗಳ ಸ್ಥಾಪನೆ, ಅವುಗಳ ನಿರ್ವಹಣೆ, ಯೋಜನೆಗಳ ಅನುಷ್ಠಾನ ಮತ್ತು ವೆಚ್ಚ ಹಂಚಿಕೊಳ್ಳುವಿಕೆಯಲ್ಲಿ ಜನತೆಯ ಪಾತ್ರ ಇದ್ದೇ ಇರುತ್ತದೆ. ಜನತೆಯ ಪಾಲ್ಗೊಳ್ಳುವಿಕೆ ಹಾಗೂ ವೆಚ್ಚ ಹಂಚಿಕೊಳ್ಳುವಿಕೆ, ಇವೇ ಸ್ವಸ್ತಿ ಯೋಜನೆಯ ಪ್ರಮುಖ ಕಾರ್ಯತಂತ್ರಗಳಾಗಿವೆ.

ಸ್ವಸ್ತಿ ಕಾರ್ಯಕ್ರಮದ ಉದ್ದೇಶ ಆಯ್ದ ಗ್ರಾಮಗಳಲ್ಲಿ ಸರ್ಕಾರದ ಕಾರ್ಯಕ್ರಮಗಳ ಅನುಷ್ಠಾನ ಹಾಗೂ ನಿಧಿಯ ಕ್ರೋಢೀಕರಣ ಹೂಡಿಕೆಯೇ ಅಲ್ಲದೆ ಜನತೆಗೆ ಖಾಸಗಿ ವಲಯದ ತಾಂತ್ರಿಕ ಮತ್ತು ವ್ಯವಸ್ಥಾಪನಾ ಕೌಶಲ್ಯವನ್ನು ಬಳಸಿಕೊಳ್ಳುವುದಾಗಿದೆ. ಖಾಸಗಿ ವಲಯದ ಕೈಗಾರಿಕೆಗಳು, ಹಣಕಾಸು ಸಂಸ್ಥೆಗಳು ಹಾಗೂ ಶೈಕ್ಷಣಿಕ ಸಂಸ್ಥೆಗಳ ಪಾಲ್ಗೊಳ್ಳುವಿಕೆಯಿಂದ ಗ್ರಾಮೀಣ ಅಭಿವೃದ್ಧಿಯನ್ನು ಅಂತಹ ಸಂಸ್ಥೆಗಳಿಗೆ ಇರುವ ಕೌಶಲ್ಯವನ್ನು ಬಳಸಿಕೊಳ್ಳಲು ನೆರವಾಗುತ್ತದೆ. ಆದ್ದರಿಂದ ಸ್ವಸ್ತಿ ಗ್ರಾಮದಲ್ಲಿ ಯಾವುದೇ ಯೋಜನೆಯಡಿ ಹೂಡುವ ಹಣದ ಶೇ40ರಷ್ಟು ಭಾಗ ಖಾಸಗಿ ವಲಯದ ದಾನಿ ಅಥವಾ ಪ್ರವರ್ತಕನಿಂದ ಬರುವುದೆಂದು ಭಾವಿಸಲಾಗಿದೆ. ರಾಜ್ಯ ಸರ್ಕಾರವು ಶೇ 50 ರಷ್ಟು ಬಂಡವಾಳ ಒದಗಿಸುವ ಹೊಣೆಗಾರಿಕೆ ಹೊಂದಿದೆ. ಉಳಿದ ಶೇ 10ರಷ್ಟು ವೆಚ್ಚವನ್ನು ಮಾತ್ರ ಗ್ರಾಮದ ಜನತೆಯಿಂದ ಸಂಗ್ರಹಿಸಲಾಗುತ್ತದೆ.

## ದತ್ತು ಗ್ರಾಮ

ದಾನಿ/ಪ್ರವರ್ತಕ ಸಂಸ್ಥೆಗಳು ನಿರ್ದಿಷ್ಟ ಗ್ರಾಮಗಳನ್ನು ದತ್ತು ತೆಗೆದುಕೊಂಡು ಅಭಿವೃದ್ಧಿ ಪಡಿಸಬಹುದು. ಇಂತಹ ಸಂದರ್ಭದಲ್ಲಿ ದತ್ತು ಗ್ರಾಮಗಳ ಅಭಿವೃದ್ಧಿಗೆ ತಗುಲಿದ ವೆಚ್ಚದ ಶೇ 40ರಷ್ಟು ಹಣವನ್ನು ಪ್ರವರ್ತಕ : ದಾನಿ ಸಂಸ್ಥೆಗಳು ಭರಿಸುತ್ತದೆ. ದತ್ತು ಗ್ರಾಮದಲ್ಲಿ ಕಾರ್ಯಕ್ರಮ ಅನುಷ್ಠಾನಗೊಳಿಸಲು ನೇಮಕಗೊಂಡ ಸರ್ಕಾರೇತರ ಸಂಘ-ಸಂಸ್ಥೆಗಳ ಸ್ಥಾಪನೆ ವೆಚ್ಚವನ್ನು ಅವು ಭರಿಸುತ್ತದೆ. ಸುಮಾರು 2000 ದಿಂದ 3000 ದವರೆಗೆ ಜನಸಂಖ್ಯೆ ಇರುವ ಮಾದರಿ ಗ್ರಾಮವೊಂದರಲ್ಲಿ ಮೂರರಿಂದ ಐದು ವರ್ಷಗಳ ಕಾಲ, ವಾರ್ಷಿಕ ಸುಮಾರು 20 ರಿಂದ 25 ಲಕ್ಷ ರೂ. ವೆಚ್ಚ ಆಗಬಹುದೆಂದು ಅಂದಾಜು ಮಾಡಲಾಗಿದೆ. ಸರ್ಕಾರ, ದಾನಿಗಳು, ಪ್ರವರ್ತಕರು ಮತ್ತು ಜನತೆವಂತಿಗೆ ನೀಡಿ ಸ್ವಸ್ತಿ ನಿಧಿಯನ್ನು ಗ್ರಾಮದಲ್ಲಿ ಪ್ರತ್ಯೇಕ ಬ್ಯಾಂಕ್ ಖಾತೆಯಲ್ಲಿ ಇಡಲಾಗುತ್ತದೆ. ಸರ್ಕಾರದ ನಾಮನಿರ್ದೇಶಿತ ವ್ಯಕ್ತಿ ಹಾಗೂ ಇನ್ನೊಬ್ಬ ದಾನಿ, ಪ್ರವರ್ತಕ ಜಂಟಿಯಾಗಿ ಖಾತೆ ನಿರ್ವಹಿಸುತ್ತಾರೆ.

## ಗ್ರಾಮಾಭವೃದ್ಧಿ ಸಂಘ

ಪ್ರತಿ ಸ್ವಸ್ತಿ ಗ್ರಾಮದಲ್ಲಿ ನೊಂದಾಯಿತ ಸ್ವಸ್ತಿ ಸಂಘ ಇರುತ್ತದೆ. ಸಂಘದಲ್ಲಿ ಆಡಳಿತ ಮಂಡಳಿ ಹಾಗೂ ಕಾರ್ಯಕಾರಿ ಸಮಿತಿ ಇರುತ್ತದೆ. ಆಡಳಿತ ಮಂಡಳಿಯಲ್ಲಿ ಗ್ರಾಮದ ಎಲ್ಲಾ ಗ್ರಾಮ ಪಂಚಾಯಿತಿ ಸದಸ್ಯರು, ದಾನಿ, ಪ್ರವರ್ತಕರ ಇಬ್ಬರು ಪ್ರತಿನಿಧಿಗಳು ಹಾಗೂ ಸರ್ಕಾರೇತರ ಸಂಸ್ಥೆಯ ಇಬ್ಬರು ಪ್ರತಿನಿಧಿಗಳು ಇರುತ್ತಾರೆ. ಆ ಪ್ರದೇಶದ ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿ ಸದಸ್ಯರು ಪದನಿಮಿತ್ತ ಸದಸ್ಯರಾಗಿರುತ್ತಾರೆ. ಆಯಾ ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಹಣಾ ಅಧಿಕಾರಿ ಹಾಗೂ ಜಿಲ್ಲಾಪಂಚಾಯಿತಿಯಿಂದ ನಾಮನಿರ್ದೇಶನ ಮಾಡಲಾದ ಮೂವರು ಅಧಿಕಾರಿಗಳು, ಆಡಳಿತ ಮಂಡಳಿಯ ಸದಸ್ಯರಾಗುತ್ತಾರೆ. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ವಿದ್ಯಾವಂತ ಯುವಕರು, ಮಹಿಳೆಯರು ಮೊದಲಾದವರಿಗೆ ಪ್ರಾತಿನಿಧ್ಯ ಕಲ್ಪಿಸಲು ಆಡಳಿತ ಮಂಡಳಿ ನಾಲ್ವರನ್ನು ಸಹ ಸದಸ್ಯರನ್ನಾಗಿ ನೇಮಿಸಿಕೊಳ್ಳಬಹುದು.

ಸ್ವಸ್ತಿ ಸಂಘಕ್ಕೆ ಒಂದು ಕಾರ್ಯಕಾರಿ ಸಮಿತಿ ಇರುತ್ತದೆ. ಕಾರ್ಯಕಾರಿ ಸಮಿತಿಯಲ್ಲಿ ಸರ್ಕಾರ, ದಾನಿ, ಪ್ರವರ್ತಕ ಮತ್ತು ಸರ್ಕಾರೇತರ ಸಂಸ್ಥೆಯ ಪ್ರತಿನಿಧಿಗಳು ಹಾಗೂ ಗ್ರಾಮದ ನಾಲ್ವರು ಪ್ರತಿನಿಧಿಗಳು ಇರುತ್ತಾರೆ. ಆಡಳಿತ ಮಂಡಳಿ ಮೂರು ತಿಂಗಳಿಗೊಮ್ಮೆ ಸಭೆ ಸೇರುತ್ತದೆ. ಸಾಮಾನ್ಯ ನಿರ್ದೇಶನ ನೀಡುತ್ತದೆ. ಕಾರ್ಯಕಾರಿ ಸಮಿತಿ ದೈನಂದಿನ ಕೆಲಸಗಳು ಹಾಗೂ ಕಾರ್ಯಕ್ರಮದ ಅನುಷ್ಠಾನಕ್ಕೆ ಜವಾಬ್ದಾರಿ ಆಗುರುತ್ತದೆ. ಆಗಿಂದಾಗ್ಗೆ ಗ್ರಾಮಸಭೆ ನಡೆಸಲಾಗುತ್ತದೆ.

## ಸ್ವಸ್ತಿ ಸಮನ್ವಯ ಸಮಿತಿ

ಜಿಲ್ಲಾಪಂಚಾಯಿತಿಯ ಅಧ್ಯಕ್ಷ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾಧಿಕಾರಿ, ಜಿಲ್ಲಾಪಂಚಾಯಿತಿ ಉಪಕಾರ್ಯದರ್ಶಿ, ದಾನಿ ಪ್ರವರ್ತಕ ಕಂಪನಿಗಳ ಒಬ್ಬೊಬ್ಬ ಪ್ರತಿನಿಧಿಯನ್ನು

ಒಳಗೊಂಡ ಸ್ವಸ್ತಿ ಸಮನ್ವಯ ಸಮಿತಿ ಜಿಲ್ಲಾಮಟ್ಟದಲ್ಲಿ ಕಾರ್ಯನಿರ್ವಹಿಸುತ್ತದೆ. ಪ್ರಮುಖ ಅಭಿವೃದ್ಧಿ ಇಲಾಖೆಗಳ ಜಿಲ್ಲಾ ಅಧಿಕಾರಿಗಳೂ ಸಹ ಸಮಿತಿಯಲ್ಲಿ ಇರುತ್ತಾರೆ. ಜಿಲ್ಲಾಪಂಚಾಯಿತಿ ಅಧ್ಯಕ್ಷರು ಸಮಿತಿಯ ಪದನಿಮಿತ್ತ ಅಧ್ಯಕ್ಷರಾಗಿರುತ್ತಾರೆ. ಜಿಲ್ಲೆಯಲ್ಲಿ ಸ್ವಸ್ತಿ ಯೋಜನೆಯ ಅನುಷ್ಠಾನ, ಸರ್ಕಾರಿ ಮತ್ತು ಸರ್ಕಾರೇತರ ಸಂಸ್ಥೆಗಳ ನಡುವೆ ಸಮನ್ವಯ ತರುವ ಹಾಗೂ ಗ್ರಾಮಾಭಿವೃದ್ಧಿ ಸಂಸ್ಥೆಗಳಿಗೆ ಮಾರ್ಗದರ್ಶನ ನೀಡುವುದು ಸಮನ್ವಯ ಸಮಿತಿಯ ಜವಾಬ್ದಾರಿ ಆಗಿದೆ.

## ಸ್ವಸ್ತಿ ಪ್ರಾಧಿಕಾರ

ಸ್ವಸ್ತಿ ಕಾರ್ಯಕ್ರಮ ಅನುಷ್ಠಾನದ ರೂಪುರೇಷೆ ನಿರ್ಧರಿಸಲು ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಸ್ವಸ್ತಿ ಪ್ರಾಧಿಕಾರ ರಚಿಸಲಾಗುತ್ತದೆ. ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಖಾತೆ ಸಚಿವರು ಪ್ರಾಧಿಕಾರದ ಉಪಾಧ್ಯಕ್ಷರಾಗಿರುತ್ತಾರೆ. ದಾನಿ/ಪ್ರವರ್ತಕ ಸಮುದಾಯದಿಂದ ಕನಿಷ್ಟ ಹತ್ತು ಪ್ರತಿನಿಧಿಗಳು ಇರುತ್ತಾರೆ. ಸರಕಾರದ ವಿವಿಧ ಅಭಿವೃದ್ಧಿ ಇಲಾಖೆಗಳ ಉತ್ತಮ ಅಧಿಕಾರಿಗಳು ಪ್ರಾಧಿಕಾರದ ಸದಸ್ಯರಾಗಿರುತ್ತಾರೆ.

## ಸ್ವಸ್ತಿ ಗ್ರಾಮ

ಸ್ವಸ್ತಿ ಕಾರ್ಯಕ್ರಮದ ಪ್ರಯೋಜನ ಪಡೆದು ಅಭಿವೃದ್ಧಿ ಹೊಂದಿದ ಗ್ರಾಮಗಳಿಗೆ ಸ್ವಸ್ತಿ ಗ್ರಾಮ ಎಂಬ ಹೆಸರು ಇಡಲಾಗುವುದು. ಸ್ವಸ್ತಿ ಗ್ರಾಮ ಹೆಸರು ಪಡೆದ ಹಳ್ಳಿ ಸರ್ವತೋಮುಖ ಅಭಿವೃದ್ಧಿ ಹೊಂದಿ ಮಾದರಿ ವಾಸಸ್ಥಳವಾಗಿ ರೂಪುಗೊಂಡಿದೆ ಎಂಬುದನ್ನು ಪ್ರತಿನಿಧಿಸುತ್ತದೆ. ದಾನಿ ಪ್ರವರ್ತಕರು ಸ್ವಸ್ತಿ ಗ್ರಾಮ ಕಾರ್ಯಕ್ರಮದಲ್ಲಿ ತಮ್ಮ ಯಶಸ್ವಿ ಪಾಲ್ಗೊಳ್ಳುವಿಕೆಯನ್ನು ಸೂಚಿಸಲು ಗ್ರಾಮದ ಹೆಸರಿನ ಹಿಂದೆ ತಮ್ಮ ಸಂಸ್ಥೆಯ ಹೆಸರನ್ನು ಸೇರಿಸಿಕೊಳ್ಳಲು ಅವಕಾಶ ಇರುತ್ತದೆ.

## ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

* * *

ಶ್ರೀ ಜಗದೀಶ್ ಶೆಟ್ಟರ್ : ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ವಿವರವಾದ ಉತ್ತರವನ್ನು ಕೊಟ್ಟಿದ್ದಾರೆ. ಇವತ್ತಿನ ದಿವಸ ಸ್ವಸ್ತಿಗ್ರಾಮ ಯೋಜನೆಯನ್ನು ಜಾರಿಗೊಳಿಸುತ್ತಿದ್ದಾರೆ. ಇದು ಅತ್ಯುತ್ತಮ ಯೋಜನೆ, ಇದನ್ನು ನಾನು ಸ್ವಾಗತ ಮಾಡುತ್ತಿದ್ದೇನೆ. ಆದರೆ, ಈ ಯೋಜನೆಗೆ ಶೇ. 50 ರಷ್ಟು ಅನುದಾನವನ್ನು ಜಿಲ್ಲಾ ಪಂಚಾಯಿತಿಯಿಂದ ಕೊಡಿಸುತ್ತೇವೆ ಎಂದು ಹೇಳುತ್ತಿದ್ದಾರೆ. ಶೇ. 40ರಷ್ಟು ಹಣ ಖಾಸಗೀ ಸಂಸ್ಥೆಗಳಿಂದ ಕ್ರೋಢೀಕರಣವಾಗತಕ್ಕಂಥಾದ್ದು ಇದೆ. ಇನ್ನುಳಿದ ಶೇ.10 ರಷ್ಟನ್ನು ಗ್ರಾಮದವರೇ ಹಾಕಬೇಕು. ಅಂದರೆ ಇದಕ್ಕೆ ರಾಜ್ಯ ಸರ್ಕಾರದ ಕೊಡುಗೆ ಏನೂ ಇಲ್ಲವೇ? ಮತ್ತು ಶೇ.50 ರಷ್ಟು ಹಣ ಜಿಲ್ಲಾ ಪಂಚಾಯಿತಿಯಿಂದ ತೆಗೆದುಕೊಳ್ಳುವುದಾದರೆ ಅಷ್ಟು ಹಣ ಅಲ್ಲಿ ಕಡಿಮೆಯಾಗುವುದಿಲ್ಲವೇ? ಇದರ ಬಗ್ಗೆ ಸನ್ಮಾನ್ಯ ಸಚಿವರು ಉತ್ತರ ಕೊಡಬೇಕು ಮತ್ತು ಸ್ವಸ್ತಿ ಗ್ರಾಮ ಯೋಜನೆಯಲ್ಲಿ ಸೆಲೆಕ್ಷನ್ ಮಾಡುವಂಥ ನಾರ್ಮ್ಸ್‌ಗಳೇನು ಎನ್ನುವುದನ್ನು ತಮ್ಮ

ಉತ್ತರದಲ್ಲಿ ಎಲ್ಲಿಯೂ ಹೇಳಿಲ್ಲ ಮತ್ತು ಎಷ್ಟು ಗ್ರಾಮಗಳನ್ನು ಈ ಯೋಜನೆಯಲ್ಲಿ ಸದ್ಯಕ್ಕೆ ತೆಗೆದುಕೊಳ್ಳುತ್ತಾರೆ ಎನ್ನುವುದಕ್ಕೆ ದಯವಿಟ್ಟು ಮಾನ್ಯ ಸಚಿವರು ಉತ್ತರ ಕೊಡಬೇಕು.

ಶ್ರೀ ಎಂ. ಪಿ. ಪ್ರಕಾಶ್ : ಸನ್ಮಾನ್ಯ ಅಧ್ಯಕ್ಷರೇ, ಸ್ವಸ್ತಿ ಗ್ರಾಮದ ವಿಷಯ ಹೇಳಬೇಕೆಂದರೆ, ಜಿಲ್ಲಾ ಪಂಚಾಯತಿಗಳಲ್ಲಿ ವಿವಿಧ ಯೋಜನೆಗಳು ಏನಿವೆ, ಆ ವಿವಿಧ ಯೋಜನೆಗಳ ಮೂಲಕವಾಗಿಯೇ ನಾವು ಈ ಕಾರ್ಯಕ್ರಮವನ್ನು ಕೈಗೊಳ್ಳುತ್ತಿದ್ದೇವೆ. ಜಿಲ್ಲಾ ಪಂಚಾಯಿತಿಗೆ ಬಂದಿರತಕ್ಕ ಹಣ ಎಂದರೆ ಅದು ಸರ್ಕಾರದ ಹಣವೇ. ವಿವಿಧ ಯೋಜನೆಗಳಿಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ತಮ್ಮ ತಮ್ಮ ಪಾಲಿನ ವಂತಿಗೆಯನ್ನು ಕೊಟ್ಟಿರುತ್ತವೆ. ಅವು ವಿವಿಧ ಯೋಜನೆಗಳಾಗಿ ಜಿಲ್ಲಾ ಪಂಚಾಯಿತಿಯಲ್ಲಿ ಕಾರ್ಯಗತಗೊಳಿಸಲ್ಪಡುತ್ತವೆ. ಅವುಗಳಲ್ಲಿ ಈ ಸ್ವಸ್ತಿ ಗ್ರಾಮ ಯೋಜನೆಯಂಥ ವಿಶೇಷ ಕಾರ್ಯಕ್ರಮಗಳು ಏನಿವೆ, ಆ ಗ್ರಾಮದ ಅಭಿವೃದ್ಧಿಗೆ ಸಂಬಂಧಿಸಿದಂತೆ, ಅದಕ್ಕೆ ನಾವು ಹಣವನ್ನು ವೆಚ್ಚ ಮಾಡುತ್ತೇವೆ. ಇನ್ನು ಇದನ್ನು ಒಂದು ರಾಷ್ಟ್ರೀಯ ಕಾರ್ಯಕ್ರಮವನ್ನಾಗಿ ಮಾಡಬೇಕು ಎನ್ನುವ ಒಂದು ಯೋಚನೆ ಇರುವುದರಿಂದ, ಅದಕ್ಕೆ ಕೇಂದ್ರ ಸರ್ಕಾರದ ಅನುದಾನವನ್ನೂ ಪಡೆಯಬೇಕು, ಮುಂದೆ ನಡೆಯುವಂಥ ಮುಖ್ಯ ಮಂತ್ರಿಗಳ ಸಭೆಯಲ್ಲಿ, ಇದನ್ನು ಒಂದು ರಾಷ್ಟ್ರೀಯ ಕಾರ್ಯಕ್ರಮವಾಗಿ ಸ್ವೀಕಾರ ಮಾಡಬೇಕು ಎಂದು ನಮ್ಮ ಮುಖ್ಯ ಮಂತ್ರಿಗಳು ಪ್ರಧಾನ ಮಂತ್ರಿಗಳ ಗಮನಕ್ಕೆ ತರತಕ್ಕಂಥ ಒಂದು ಪ್ರಯತ್ನ ಕೂಡ ಇದೆ. ಇದರ ಬಗ್ಗೆ ನಾವು ಆಯೋಗದವರ ಜೊತೆಗೆ ಮಾತನಾಡಬೇಕು ಅಥವಾ ಯಾರ ಜೊತೆಗೆ ಮಾತನಾಡಬೇಕು ಎನ್ನುವುದು ಪ್ರಾರಂಭಿಕ ಸ್ಥಿತಿಯಲ್ಲಿ ಇದೆ. ಇಂಥ ಒಂದು ಯೋಜನೆಯನ್ನು ನಾವು ಇಟ್ಟುಕೊಂಡಿದ್ದೇವೆ. ಆಗ ಹೆಚ್ಚು ಹಣ ಬರಲೂ ಕೂಡ ಸಾಧ್ಯತೆ ಇದೆ. ಈಗ ಸಧ್ಯದಲ್ಲಿ ಈ ವರ್ಷದಲ್ಲಿ ಒಂದು ನೂರು ಗ್ರಾಮಗಳನ್ನು ಈ ರೀತಿ ಆಯ್ಕೆ ಮಾಡಬೇಕು. ಮುಂದೆ 224 ಗ್ರಾಮಗಳನ್ನು ತೆಗೆದುಕೊಂಡು ಪ್ರತಿಯೊಂದು ಕ್ಷೇತ್ರಕ್ಕೂ ಒಂದೊಂದು ಗ್ರಾಮ ಕೊಡಬೇಕು ಎನ್ನುವುದು ಇದೆ. ಈಗ ಶೇ. 40 ಭಾಗವನ್ನು ಕೊಡತಕ್ಕಂಥ ಕೈಗಾರಿಕೋದ್ಯಮಿಗಳು, ಬ್ಯಾಂಕುಗಳು, ಬೇರೆ ಬೇರೆ ಸಂಘ ಸಂಸ್ಥೆಗಳು ಸಾಧ್ಯಾವಾದಷ್ಟು ಮಟ್ಟಿಗೆ ತಮ್ಮ ಪರಿಸರದ ಸುತ್ತಮುತ್ತಲಲ್ಲಿ ನಡೆಸಬೇಕು ಎನ್ನುವ ಪ್ರಯತ್ನ ಇರುವುದರಿಂದ, ಅವರು ಎಷ್ಟೆಷ್ಟು ದೂರದಲ್ಲಿ ಸ್ವಾಗತ ಮಾಡಿ ಅನುಕೂಲಗಳನ್ನು ಕಲ್ಪಿಸಿ ಕೊಡುತ್ತಾರೆ, ಆ ಪ್ರಾಮಾಣದಲ್ಲಿ ತೆಗೆದುಕೊಳ್ಳುತ್ತಿದ್ದೇವೆ. ಪ್ರಾಯಶಃ ಒಂದು ನೂರು ಗ್ರಾಮಗಳನ್ನು ಈ ಸಲ ತೆಗೆದುಕೊಳ್ಳುತ್ತಿದ್ದೇವೆ. 3,000 ಜನಸಂಖ್ಯೆ ಒದಗಿರತಕ್ಕಂಥ ಗ್ರಾಮಗಳು ಮತ್ತು ಹೆಂಡದ ಅಂಗಡಿಗಳು ಇಲ್ಲದೇ ಇರತಕ್ಕಂಥ ಗ್ರಾಮಗಳನ್ನು ನಾವು ತೆಗೆದುಕೊಳ್ಳುತ್ತಿದ್ದೇವೆ.

ಶ್ರೀ ಬಿ. ಎಸ್. ಯಡಿಯೂರಪ್ಪ : "ಏಸೂರು ಕೊಟ್ಟರೂ ಈಸೂರು ಕೊಡೆವು" ಎಂದು ಸ್ವತಂತ್ರ್ಯ ಸಂಗ್ರಾಮದಲ್ಲಿ ಹೋರಾಟ ಮಾಡಿ ನೇಣುಗಂಬಕ್ಕೆ ಏರಿರುವುದೂ ಉಂಟು. ಅದನ್ನು ತಮ್ಮ ಗಮನಕ್ಕೆ ತಂದಿದ್ದೆ. ಸ್ವಾತಂತ್ರ್ಯೋತ್ಸವದ ಸುವರ್ಣ ಜಯಂತಿಯನ್ನು ಆಚರಿಸುವಂಥ ಕಾಲದಲ್ಲಿ ಈ ಯೋಜನೆಯನ್ನು ಮೊದಲು ಈಸೂರಿನಿಂದ ಪ್ರಾರಂಭ ಮಾಡಿ. ಅದು ಒಂದು ಐತಿಹಾಸಿಕ ಸ್ಥಳ ಎಂದು ಹೇಳಿದ್ದೆ. ಅದನ್ನು ಇದರಲ್ಲಿ ಸೇರಿಸಿದ್ದೀರಾ? ಅಲ್ಲಿ ಪ್ರಾರಂಭ ಮಾಡುತ್ತೀರಾ? ಎನ್ನುವುದನ್ನು ಕೇಳುತ್ತೇನೆ.

ಶ್ರೀ ಎಂ. ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೇ, ಈಗಾಗಲೇ ನಾವು ಸುಮಾರು 20-22 ಪಟ್ಟಿಗಳನ್ನು ಮಾಡಿದ್ದೇವೆ. ಅದರಲ್ಲಿ ಈಸೂರು ಗ್ರಾಮ ಕೂಡ ಸೇರಿದೆ. ಅದರ ಬಗ್ಗೆ ಕೈಗಾರಿಕೋದ್ಯಮಿಗಳ ಜೊತೆ ಮಾತನಾಡಿ ಆ ಗ್ರಾಮವನ್ನು ತೆಗೆದುಕೊಂಡಿದ್ದೇವೆ.

ಅಧ್ಯಕ್ಷರು : ಈಗ ಮುಂದಿನ ಪ್ರಶ್ನೆ, ಕುಂಬಳೆ ಸುಂದರರಾವ್. ಕುಂಬಳೆ ಸುಂದರರಾವ್ ಅವರೇ ತಾವು ಪ್ರಶ್ನೆ ಕೇಳಿ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೇ, ಬಹಳ ಮಹತ್ವವಾದ ಪ್ರಶ್ನೆ ಇದೆ. ನಾನು ಹೆಚ್ಚು ಉಪಪ್ರಶ್ನೆಗಳನ್ನು ಕೇಳುವುದಿಲ್ಲ. ಇಂಥವಕ್ಕೆ ಮಾನ್ಯ ಅಧ್ಯಕ್ಷರು ದಯವಿಟ್ಟು ಅವಕಾಶವನ್ನು ಕೊಡಬೇಕು. ಮಹಾರಾಷ್ಟ್ರದಲ್ಲಿ ಸಂಕಲ್ಪ ಪ್ರಕಲ್ಪ ಎನ್ನುವ ಯೋಜನೆಯನ್ನು ತಂದಿದ್ದಾರೆ. ಅದರಲ್ಲಿ 300 ಗ್ರಾಮಗಳನ್ನು ಆಳವಡಿಸಿದ್ದಾರೆ. ಅಲ್ಲಿ ಏನು ಮಾಡಿದ್ದಾರೆಂದರೆ, ಅಲ್ಲಿ ಒಂದು ಉನ್ನತ ಸಮಿತಿಯನ್ನು ಮಾಡಿದ್ದಾರೆ. ಅಲ್ಲಿ ಮುಖ್ಯ ಮಂತ್ರಿಗಳಾಗಲೀ, ಬೇರೆ ಮಂತ್ರಿಗಳಾಗಲೀ, ಅಥವಾ ಬೇರೆ ಯಾರೂ ಸರ್ಕಾರದ ವತಿಯಿಂದ ಅಲ್ಲಿ ಅಧ್ಯಕ್ಷರಾಗಿಲ್ಲ. ಅಲ್ಲಿ ಅಣ್ಣಾ ಹಜಾರೆ ಎನ್ನುವ ಒಬ್ಬ ಹಿರಿಯ ಸಮಾಜ ಸೇವಕರು ಆ ಸಮಿತಿಯ ಅಧ್ಯಕ್ಷರಾಗಿದ್ದಾರೆ. ಅಂಥ ಒಂದು ಪರಿಕಲ್ಪನೆಯ ಒಂದು ಉನ್ನತ ಸಮಿತಿಯನ್ನು ಮಾಡಿ ಅದರ ಒಂದು ನೇತೃತ್ವದಲ್ಲಿ ಈ ಯೋಜನೆಯನ್ನು ಅಳವಡಿಸಿಕೊಂಡರೆ, ಅನುಷ್ಠಾನಗೊಳಿಸಿದರೆ ಆಗ ಈ ಯೋಜನೆಯ ಕಲ್ಪನೆ ಏನಿದೆ, ಇವತ್ತು ಏನು ಗ್ರಾಮೀಣಾಭಿವೃದ್ಧಿ ಸಚಿವರು ಕಲ್ಪನೆ ಮಾಡಿಕೊಂಡಿದ್ದಾರೆ ಆ ಯೋಜನೆ ನಿಜವಾಗಿ ಅನುಷ್ಠಾನವಾಗುತ್ತದೆ. ಮೋಹನ್ ಧಾರಿಯ ಅಂಥವರು ಆ ಸಮಿತಿಯ ಸದಸ್ಯರಾಗಿದ್ದಾರೆ. ಅಣ್ಣಾ ಹಜಾರೆಯವರು ಅಧ್ಯಕ್ಷರಾಗಿದ್ದಾರೆ. ಅಂಥವರ ಕೈಯ್ಯಲ್ಲಿ ಈ ನಮ್ಮ ಕರ್ನಾಟಕದ ಒಂದು ಸಮಿತಿ ಕೆಲಸ ಮಾಡಿದರೆ, ಯಾವುದೇ ಒಂದು ರಾಜಕೀಯದ ಹಸ್ತಕ್ಷೇಪ ಇಲ್ಲದೇ ಆಗುತ್ತದೆ. ಇವತ್ತು ನಾವು ಸ್ವಸ್ತಿ ಗ್ರಾಮ ಎಂದು ಆಯ್ಕೆ ಮಾಡುವ ಸಮಯದಲ್ಲಿ ರಾಜಕೀಯ ಇಂಟರ್‌ಫಿಯರೆನ್ಸ್ ಬರುತ್ತದೆ. ಅದಕ್ಕಾಗಿ, ಆ ರೀತಿ ಅವಕಾಶ ಕೊಡದೆ, ನಿಜವಾಗಿ ಮಿಲಿಟೆಂಟ್ ಗ್ರಾಮ ಯಾವುದಿದೆ, ಹಿಂದುಳಿದ ಗ್ರಾಮ ಯಾವುದಿದೆ, ಅಂಥ ಗ್ರಾಮವನ್ನು ಆರಿಸಿಕೊಳ್ಳುವಂಥ ಒಂದು ಹೈ ಕಮಿಟಿಯನ್ನು ಎಗ್ಸಿಸ್‌ಟೆನ್ಸ್‌ಗೆ ತೆಗೆದುಕೊಂಡು ಬಂದು ಕೆಲಸ ಮಾಡುವಂಥಾದ್ದನ್ನು ಮಾನ್ಯ ಸಚಿವರು ಗಮನಿಸಬೇಕು ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತಿದ್ದೇನೆ. ಮತ್ತು ಮಹಾರಾಷ್ಟ್ರದಲ್ಲಿ ಆ ಯೋಜನೆ ವಿಶೇಷವಾಗಿದೆ, ಅದನ್ನು ನೋಡಿಕೊಂಡು ದಯವಿಟ್ಟು ಅವರು ಅದೇ ರೀತಿ ಅನುಷ್ಠಾನಗೊಳಿಸಬೇಕು ಎಂದು ನಾನು ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೇ, ಬಹಳ ಯೋಗ್ಯವಾದಂಥ ಸಲಹೆಯನ್ನು ಕೊಟ್ಟಿದ್ದಾರೆ. ಅಣ್ಣಾ ಹಜಾರೆಯವರು ಮಾಡಿದಂಥ ಒಂದು ಕ್ರಾಂತಿಯ ವಿಚಾರವೂ ಕೂಡ ಈ ಸ್ವಸ್ತಿ ಗ್ರಾಮ ಯೋಜನೆಯ ಪರಿಕಲ್ಪನೆ ಮಾಡುವಾಗ ನಮಗೆ ಪ್ರೇರಕ ಶಕ್ತಿಯಾಗಿದೆ. ಅಣ್ಣಾ ಹಜಾರೆಯವರ ಆದರ್ಶ ಗ್ರಾಮ ಮಹಾರಾಷ್ಟ್ರದಲ್ಲಿರತಕ್ಕಂಥಾದ್ದನ್ನೂ ಕೂಡ ಇದರಲ್ಲಿ ಆಳವಡಿಸಿಕೊಂಡಿದ್ದೇವೆ. ದುರ್ದೈವವಶಾತ್ ನಾವು ಕರ್ನಾಟಕದಲ್ಲಿ ಮತ್ತೊಬ್ಬ ಅಣ್ಣಾ ಹಜಾರೆಯನ್ನು ತಯಾರು ಮಾಡಬೇಕಾಗುತ್ತದೆ. ಆದರೆ ಅಲ್ಲಿರತಕ್ಕಂಥಾದ್ದರಲ್ಲಿ ಶೇ.40 ಭಾಗವನ್ನು ಕೊಡಬೇಕು ಎನ್ನುವ ವಿವರಗಳು ನಮ್ಮ ಹತ್ತಿರ ಇಲ್ಲ.

ಅಲ್ಲಿ ಬೇರೆ ಜನಗಳು ಪಾಲುಗೊಳ್ಳುವಂಥಾದ್ದು, ಅಲ್ಲಿಯ ಪ್ರಾಯೋಜಕರಾಗಿರತಕ್ಕಂಥವರು ಮತ್ತು ಅದರ ಅನುಕೂಲಗಳನ್ನು ಪಡೆದಂಥವರು ಮಾತ್ರ ಇದರಲ್ಲಿ ಭಾಗವಹಿಸುತ್ತಾರೆ. ಆದರೆ ಇಲ್ಲಿ ಕೈಗಾರಿಕೋದ್ಯಮಿಗಳು, ಬ್ಯಾಂಕುಗಳು ಮತ್ತು ಬೇರೆ ಬೇರೆ ಸಂಘ ಸಂಸ್ಥೆಗಳೂ ಕೂಡ ಇದರಲ್ಲಿ ಪಾಲುಗೊಳ್ಳಲು ಅವಕಾಶವಿದೆ. ಆದ್ದರಿಂದ ಅದಕ್ಕೂ ಇದಕ್ಕೂ ಸ್ವಲ್ಪ ಮಟ್ಟಿಗೆ ವ್ಯತ್ಯಾಸ ಇದೆ. ನಾವು ಇದರಲ್ಲಿ ರಾಜಕೀಯ ಹಸ್ತಕ್ಷೇಪ ಮಾಡುತ್ತೇವೆ ಎನ್ನುವಂಥ ಪ್ರಶ್ನೆ ಬರುವುದಿಲ್ಲ. ಏಕೆಂದರೆ 224 ಕ್ಷೇತ್ರಗಳಲ್ಲಿ ಒಂದೊಂದನ್ನು ಆಯ್ಕೆ ಮಾಡುವಂಥ ಸಂದರ್ಭ ಬಂದಾಗ ನಾವು ಅದರಲ್ಲಿ ಭೇದಭಾವ ಮಾಡುತ್ತೇವೆ ಎಂದು ತಾವು ಅದರಲ್ಲಿ ಸಂಶಯ ಪಡಬೇಕಾದಂಥ ಅಗತ್ಯವಿಲ್ಲ.

## ಮೂಡುಶೆಡ್ಡೆಯಲ್ಲಿ ಜನರಲ್ ಆಸ್ಪತ್ರೆ ತೆರೆಯುವುದರ ಬಗ್ಗೆ

550 - ಶ್ರೀ ಕುಂಬ್ಳೆ ಸುಂದರರಾವ್ (ಸುರತ್ಕಲ್) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) *ಮಂಗಳೂರಿನಿಂದ ಕಾರ್ಕಳದತನಕ ಬರುವ ಊರುಗಳಲ್ಲಿ ಪೂರ್ಣರೂಪದ ಸರ್ಕಾರಿ ಆಸ್ಪತ್ರೆ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

2) *ಮಂಗಳೂರು ವೆನ್‌ಲಾಕ್ ಆಸ್ಪತ್ರೆಯ ಹೊರತು ಪೂರ್ಣರೂಪದ ಆಸ್ಪತ್ರೆಯೊಂದು ಮೂಡುಶೆಡ್ಡೆಯಲ್ಲಿ ಸ್ಥಾಪಿಸಬೇಕೆಂಬ ಮನವಿ ಸರ್ಕಾರಕ್ಕೆ ಬಂದಿದೆಯೇ?*

3) *ಮೂಡುಶೆಡ್ಡೆಯಲ್ಲಿ ಹೊಸದಾಗಿ ನಿರ್ಮಾಣವಾದ ಕಟ್ಟಡದಲ್ಲಿ ಕ್ಷಯ ರೋಗ ಆಸ್ಪತ್ರೆಯ ಜೊತೆಯಲ್ಲಿ ಜನರಲ್ ಆಸ್ಪತ್ರೆಯನ್ನು ತೆರೆಯುವ ಬಗ್ಗೆ ಸರ್ಕಾರ ಯೋಚಿಸುವುದೇ?*

ಡಾ|| ಹೆಚ್. ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಬಂದಿದೆ.

ಆ) ಬಂದಿರುವುದಿಲ್ಲ.

ಇ) ಜಿಲ್ಲಾ ಪಂಚಾಯಿತಿ, ದಕ್ಷಿಣ ಕನ್ನಡ, ಮಂಗಳೂರು ಇವರಿಂದ 50 ಹಾಸಿಗೆ ಆಸ್ಪತ್ರೆಯನ್ನು ಸ್ಥಾಪಿಸುವ ಬಗ್ಗೆ ಅವಶ್ಯಕವಾದ ಪ್ರಸ್ತಾವನೆ ಬಂದಲ್ಲಿ ಅದನ್ನು ಪರಿಶೀಲಿಸಲಾಗುವುದು.

ಶ್ರೀ ಕುಂಬಳೆ ಸುಂದರರಾವ್ : ಮಾನ್ಯ ಅಧ್ಯಕ್ಷರೇ, ಮಂಗಳೂರಿನಿಂದ ಕಾರ್ಕಳದತನಕ ಬರುವ ಊರಿನಲ್ಲಿ ಮಧ್ಯೆ ಎಲ್ಲೂ ಸಹ ಪೂರ್ಣ ರೂಪದ ಆಸ್ಪತ್ರೆ ಇಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದರೆ, ಬಂದಿದೆ ಎಂದು ಉತ್ತರ ಕೊಟ್ಟಿದ್ದಾರೆ. ಆದರೆ, ವೆನಲಾಕ್ ಆಸ್ಪತ್ರೆಯ ಹೊರತು ಪೂರ್ಣ ರೂಪದ ಆಸ್ಪತ್ರೆಯೊಂದನ್ನು ಮೂಡುಶೆಡ್ಡೆಯಲ್ಲಿ ಸ್ಥಾಪಿಸಲು ಸರ್ಕಾರ ಸಿದ್ಧವಿದೆಯೇ ಎಂದು ಕೇಳಿದರೆ, ಅಂಥ ಅಪೇಕ್ಷೆ ಬಂದಿರುವುದಿಲ್ಲ ಎಂದು ಉತ್ತರ ಹೇಳುತ್ತಾರೆ. ನನಗನ್ನಿಸುತ್ತದೆ, ಸರ್ಕಾರದಿಂದ ಅಥವಾ ಅಧಿಕಾರಿಗಳಿಂದ ಆರೋಗ್ಯ ಸಚಿವರಿಗೆ ಸರಿಯಾದ ಮಾಹಿತಿ ಬಂದಿಲ್ಲ. ನಾವು ಮನವಿ ಕೊಟ್ಟಿದ್ದೇವೆ, ಊರಿನಲ್ಲಿ ಸಭೆ ಮಾಡಿ ನಿರ್ಣಯ ಮಾಡಿ ಕಳುಹಿಸಿದ್ದೇವೆ, ಒಂದು